## ಸಾಕ್ಷಿಯನ್ನು ದಿಃ 09.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

### ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದ

ನಾನು ಈ ದಾವೆಯಲ್ಲಿ ಪ್ರತಿವಾದಿ ಪರ ಸಾಕ್ಷಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ, ಸತ್ಯವಾಗಿದೆ ಮತ್ತು ಸಹಿ ನನ್ನದೆ ಆಗಿದೆ.

### ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ಎಸ್ ವಕೀಲರಿಂದಃ-

ನಾನು ಸಾ-ಮಿಲ್ ನಲ್ಲಿ ಮರ ಕ್ಯುಯ್ಯುವ ಕೆಲಸ ಮಾಡುತ್ತೇನೆ. ನಾನು ಮೊದಲು ಜ್ಞಾನದೇವ್ ರವರ ಸಾ-ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದೆ, ಈಗ ಕೆ.ಆರ್ ನಗರದಲ್ಲಿ ಶಿರಾಜ್ ಸಾ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಮೊದಲು ನಾನು ಸಣ್ಣ ವಯಸ್ಸಿನವನಾದ ಕಾರಣ ಜ್ಞಾನದೇವ ರವರು ತಮ್ಮ ಮನೆಯಲ್ಲಿ ಏನು ಕೆಲಸ ಹೇಳುತ್ತಿದ್ದರೊ ಅದನ್ನು ಮಾಡಿಕೊಂಡು, ಕೆಲಸ ಕಲೆತುಕೊಂಡಿದ್ದೆ. ಜ್ಞಾನದೇವ್ ರವರು ತೀರಿಕೊಂಡು ಸುಮಾರು 35 ವರ್ಷಗಳು ಆಗಿವೆ. ಜ್ಞಾನದೇವ್ ರವರು ಜೀವಂತ ಇದ್ದಾಗ ನಾನು ಸುಮಾರು 10 ವರ್ಷಗಳ ಕಾಲ ಅವರ ಮನೆಯಲ್ಲಿ ಕೆಲಸ ಮಾಡಿದ್ದೆ. ನಾನು 17-18 ವರ್ಷ ವಯಸ್ಸಾದಾಗ ಅವರ ಮನೆಯಲ್ಲಿ ಕೆಲಸ ಸೇರಿದ್ದೆ.

ಜ್ಞಾನದೇವ್ ರವರು ಸೈಟ್ ನಂ. 13 ರಲ್ಲಿ ರಾಘವೇಂದ್ರ ಸಾ ಮಿಲ್ ಅನ್ನು ಕಟ್ಟಿಸಿರುತ್ತಾರೆ. 13 ನೇ ಸೈಟ್ ನ ಚಕ್ಕುಬಂದಿ ಪೂರ್ವಕ್ಕೆ ಗೋಡಾನ್ ಇರುತ್ತದೆ, ಪಶ್ಚಿಮಕ್ಕೆ ವಿ.ಪಿ ಬೋರೆ ರಸ್ತೆ ಇದೆ, ಉತ್ತರಕ್ಕೆ ಜೀವನ್ ಕಾಜಲ್ ರವರ ಮನೆ ಇದೆ, ದಕ್ಷಿಣಕ್ಕೆ ರತ್ನಾಪುರಿ ರಸ್ತೆ ಇರುತ್ತದೆ. ಉತ್ತರಕ್ಕೆ ಇರುವ ಜೀವನ್ ಕಾಜನ್ ರವರ ಮನೆಯ ಚಕ್ಕುಬಂದಿ ನಾನು ಹೇಳುತ್ತೇನೆ. ಪೂರ್ವಕ್ಕೆ ಜಮುನಾ ಜ್ಞಾನದೇವ್ ರವರ ಖಾಲಿ ಸೈಟ್ ಇರುತ್ತದೆ, ಅದರ ಸೈಟ್ ನಂಬರ್ ಗೊತ್ತಿಲ್ಲ, ಪಶ್ಚಿಮ ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ಉತ್ತರಕ್ಕೆ ಸಾ ಮಿಲ್ ರಸ್ತೆ ಇದೆ.

ರಾಘವೇಂದ್ರ ಸಾ–ಮಿಲ್ ಗೆ ಹೊಂದಿಕೊಂಡಂತೆ ಇರುವ ಅಕ್ಕಪಕ್ಕದ ಸೈಟ್ ನಂಬರ್ 11, 12 ಮತ್ತು 15 ಆಗಿರುತ್ತದೆ. ಸೈಟ್ ನಂಬರ್ 12 ರ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸೈಟ್ ನಂಬರ್ 15 ರ ಚಕ್ಕುಬಂದಿ ಪೂರ್ವಕ್ಕೆ ಶಶಿಕಲಾ ಮತ್ತು ಶ್ರೀಧರ ಖಾಲಿ ಜಾಗ, ಪಶ್ಚಿಮಕ್ಕೆ ವಿ.ಪಿ. ಬೋರೆ ರಸ್ತೆ, ಉತ್ತರಕ್ಕೆ ಜೀವನ್ ಕಾಜಲ್ ರವರ ರಸ್ತೆ, ದಕ್ಷಿಣಕ್ಕೆ ರತ್ನಾಪುರಿ ರಸ್ತೆ ಇರುತ್ತದೆ.

ರಾಘವೇಂದ್ರ ಸಾ–ಮಿಲ್ ಕಟ್ಟಿದ್ದಂತಹ ಜಾಗ ಜ್ಞಾನದೇವ್ ರವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸೈಟ್ ನಂ.11, 12, 13 ಮತ್ತು 15 ಯಾಗಿದ್ದು ಸೇರಿದ್ದು ಎಂದರೆ ಸಾಕ್ಷಿ ಜಮುನಾ ಮತ್ತು ಜ್ಞಾನದೇವ್ ರವರಿಗೆ ಸೇರಿದ ಸೈಟ್ ಗಳು ಎನ್ನುತ್ತಾರೆ. ಆ ಬಗ್ಗೆ ಯಾವುದೆ ದಾಖಲೆಗಳನ್ನು ನೋಡಿಲ್ಲ. ಹಾಗಾದರೆ ಯಾವ ಆಧಾರದ ಮೆಲ ಅವರ ಸೈಟ್ ಗಳು ಎಂದು ಹೇಳುತ್ತಿದ್ದಿರಿ ಎಂದರೆ 40 ವರ್ಷಗಳಿಂದಲೂ ಸ್ವಾಧೀನದಲ್ಲಿ ಇದ್ದ ಆಧಾರದ ಮೇಲೆ ಹೇಳುತ್ತಿದ್ದೇನ ಎನ್ನುತ್ತಾರೆ. ಸದರಿ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ರಾಘವೇಂದ್ರ ಸಾ–ಮಿಲ್ ಪೂರ್ವಕ್ಕೆ ಇರುವ ಗೋಡಾನ್ ಇರುವ ಸೃಟ್ ನಂಬರ್ 11 ಆಗಿರುತ್ತದೆ. ಸದರಿ ಗೋಡಾನ್ ನ ಚಕ್ಕುಬಂದಿ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ವಿ.ಪಿ. ಬೋರೆ ರಸ್ತೆ, ಉತ್ತರಕ್ಕೆ ಜೀವನ್ ಕಾಜಲ್ ರವರ ರಸ್ತೆ, ದಕ್ಷಿಣಕ್ಕೆ ರತ್ನಾಪುರಿ ರಸ್ತೆ ಇರುತ್ತದೆ. ಈ ಕೇಸ್ ವಿಚಾರವಾಗಿ ನನಗೆ ಏನು ಗೊತ್ತಿಲ್ಲ, ದಾವಾ ಆಸ್ತಿಗಳು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲದಿದ್ದರೂ ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮನೆಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಇರುವ ಮನೆ ಬಾಡಿಗೆ ಮನೆ ಆಗಿರುತ್ತದೆ. ಇಲ್ಲಿಯ ವರೆಗೂ ನಾನು ಹುಣಸೂರಿನಲ್ಲಿ ಒಟ್ಟು ಎರಡೂ ಮನೆಯಲ್ಲಿ ವಾಸ ಇದ್ದೇನೆ. ಮೊದಲು ವಿ.ಪಿ ಬೋರೆಯ ಚಿಕ್ಕ ಮನೆಯಲ್ಲಿ ವಾಸ ಇದ್ದೆ, ಅದರ ಚಕ್ಕುಬಂದಿ ಗೊತ್ತಿಲ್ಲ. ಈಗ ಮಾರುತಿ ಬಡಾವಣೆಯ ಮನೆಗೆ ಬಂದು 1–1/2 ವರ್ಷ ಆಗಿರುತ್ತದೆ. ವಿ.ಪಿ ಬೋರೆಯಲ್ಲಿಯೂ ಸಹ 1 ವರ್ಷ ಬಾಡಿಗೆಗೆ ಇದ್ದೆ.

ವಿ.ಪಿ ಬೋರೆಯ, ಸಿದ್ದಪ್ಪಾಜಿ ದೇವಸ್ಥಾನದ ರಸ್ತೆಯ ಪಕ್ಕದಲ್ಲಿ ನಮ್ಮ ಮನೆ ಇದೆ. ಪ್ರತಿವಾದಿಯ ಆಮಿಷಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.